ಮೂಲ ದಾವಾ ನಂಃ 24/2024
ಪಿ.ಡಬ್ಲ್ಯೂಃ 01

( ಇಂದು ದಿನಾಂಕಃ 05.02.2025 ರಂದು ಪಿ. ಡಬ್ಲು 1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಾದ ಶ್ರೀ ಜಿ. ಪಿ. ಟಿ. ರವರಿಂದಃ**

10. ದಾವಾ ಶೆಡ್ಯೂಲಿನಲ್ಲಿ ಕಾಣಿಸಿರುವ ಮೂರೂ ಆಸ್ತಿಗಳ ಬಗ್ಗೆ ನೀವು ಎಗ್ರಿಮೆಂಟ್ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಈ ದಾವೆ ಸಲ್ಲಿಸುವಾಗ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಶೆಡ್ಯೂಲಿನಲ್ಲಿ ಕಾಣಿಸಿರುವ ಆಸ್ತಿಗಳನ್ನೇ ಎಗ್ರಿಮೆಂಟಿನಲ್ಲಿ ಕಾಣಿಸಲಾಗಿದೆ. ದಾವಾ ಶೆಡ್ಯೂಲ್ ಕ್ರಮ ಸಂಖ್ಯೆ 3 ರ ಆಸ್ತಿಗೆ ಸಂಬಂಧಿಸಿದಂತೆ ನಿಪಿ. 3 ರ ಪಹಣಿ ಪತ್ರಿಕೆಯಲ್ಲಿ 4 ಗುಂಟೆ 6 ಆಣೆ ಅಂತಾ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಆರ್ ಟಿ ಸಿ ಪ್ರಕಾರವೇ ನಾವು ಮಾಡಿದ್ದು ಇದೆ ಅಂತಾ ಉತ್ತರಿಸುತ್ತಾರೆ. ಸಾಕ್ಷಿಗೆ ನಿಪಿ. 3 ರ ಪಹಣಿ ಪತ್ರಿಕೆಯನ್ನು ತೋರಿಸಿ ಅದರಲ್ಲಿ 4 ಗುಂಟೆ 6 ಆಣೆ ಅಂತಾ ನಮೂದು ಇದೆಯೇ ಅಂತಾ ಕೇಳಿದ್ದಕ್ಕೆ ಸಾಕ್ಷಿ ಅದನ್ನು ನೋಡಿ ಅದರಲ್ಲಿ 3 ಗುಂಟೆ 6 ಆಣೆ ಹಾಗೂ 25 ಇದೆ ಅಂತಾ ಉತ್ತರಿಸುತ್ತಾರೆ. ನಿಪಿ 3 ರಲ್ಲಿ ತೋರಿಸಿರುವಂತೆ ಸದ್ರಿ 3 ಗುಂಟೆ 6 ಆಣೆ ಜಮೀನು ಲೂಯಿಸ್ ಫರಾಸಿಕ್ ಡಾಯಸ್ ಎಂಬವರ ಹೆಸರಿನಲ್ಲಿ ಇದೆ. ನಿಪಿ 3 ರಲ್ಲಿ ಕಾಣಿಸಿರುವ 3 ಗುಂಟೆ 6 ಆಣೆ ಜಮೀನು ಪ್ರತಿವಾದಿಯರಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿ. ನಿಪಿ. 4 ರ ಪುಟ ನಂಬ್ರ 4 ರಲ್ಲಿ ಕಾಣಿಸಿರುವ ಶೆಡ್ಯೂಲಿನಲ್ಲಿ ನಮೂದಿಸಿರುವ ಸರ್ವೆ ನಂಬ್ರ 329/1 ಕ್ಷೇತ್ರ 4 ಗುಂಟೆ 6 ಆಣೆ ಬಗ್ಗೆ ದಾವಾ ಪತ್ರದಲ್ಲಿ ಯಾವದೇ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ನಿಪಿ. 4 ರಲ್ಲಿ ಈ ಮೇಲೆ ಹೇಳಿರುವ ಆಸ್ತಿ ಅಸ್ತಿತ್ವದಲ್ಲಿ ಇರುವ ಬಗ್ಗೆ ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಅಂತಾ ಉತ್ತರಿಸುತ್ತಾರೆ. ನಾನು ಹಾಜರುಪಡಿಸಿದ ದಾಖಲೆಗಳೆಂದರೆ ನಿಪಿ. 1 ಸರ್ವೆ ನಂಬ್ರ 329/10 ಕ್ಷೇತ್ರ 1 ಗುಂಟೆ, ನಿಪಿ. 2 ಸರ್ವೆ ನಂಬ್ರ 329/6 ಕ್ಷೇತ್ರ 6 ಗುಂಟೆ 4 ಆಣೆ ಹಾಗೂ ನಿಪಿ. 3 ಸರ್ವೆ ನಂಬ್ರ 239/2 ಅ ಕ್ಷೇತ್ರ 17 ಗುಂಟೆ ಆಗಿರುತ್ತದೆ ಎಂದರೆ ಸಾಕ್ಷಿ ಎಷ್ಟು ಪಹಣಿ ಪತ್ರಿಕೆಗಳು ಇವೆ ಎಂಬುದು ನನಗೆ ಗೊತ್ತಿಲ್ಲ ಏಕೆಂದರೆ ಕುಟುಂಬದವರೆಲ್ಲರ ಹೆಸರು ಪಹಣಿ ಪತ್ರಿಕೆಯಲ್ಲಿ ಇದೆ ಅಂತಾ ಉತ್ತರಿಸುತ್ತಾರೆ. ಯಾವ ಸರ್ವೆ ನಂಬ್ರ ಹಾಗೂ ಹಿಸ್ಸೆಗೆ ಯಾರೆಲ್ಲರ ಹೆಸರು ಪಹಣಿ ಪತ್ರಿಕೆಯಲ್ಲಿ ಇದೆ ಎಂದರೆ ಈಗ ನೆನಪಿಗೆ ಬರುವುದಿಲ್ಲ

ಅಂತಾ ಉತ್ತರಿಸುತ್ತಾರೆ. ನಾನು ಹಾಜರುಪಡಿಸಿರುವ ನಿಪಿ 3 ರ ಪಹಣಿ ಪತ್ರಿಕೆಯಲ್ಲಿ ಸುಮಾರು 6 ಜನರ ಹೆಸರು ಇದೆ ಎಂದರೆ ಸರಿ. ಸದ್ರಿ ಪಹಣಿ ಪತ್ರಿಕೆಯಲ್ಲಿ ಕಾಣಿಸಿರುವ ವ್ಯಕ್ತಿಗಳಿಂದ ಎಗ್ರಿಮೆಂಟನ್ನು ಬರೆಯಿಸಿಕೊಂಡಿರುವುದಿಲ್ಲ.

11. ನಿಪಿ. 4 ರ ಎಗ್ರಿಮೆಂಟಿನಲ್ಲಿ ಎರಡು ತರಹದ ಆಸ್ತಿಗಳು ಇವೆ ಎಂದರೆ ಸರಿಯಲ್ಲ. ಸದ್ರಿ ಎಗ್ರಿಮೆಂಟಿನಲ್ಲಿ ಈಗ ಇದ್ದ ಹಾಗೂ ಮುಂದೆ ಬರಬಹುದಾದ ಆಸ್ತಿಗಳ ಬಗ್ಗೆ ಉಲ್ಲೇಖ ಇರುತ್ತದೆ ಎಂದರೆ ಸರಿಯಲ್ಲ. ಎಗ್ರಿಮೆಂಟ್ ಮಾಡಿಕೊಂಡ ನಂತರ ಆಸ್ತಿಗಳ ಬಗ್ಗೆ ಭೂಪರಿವರ್ತನೆಗೆ ಅರ್ಜಿ ವಗೈರೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನಾನು ಆ ಬಗ್ಗೆ ಅರ್ಜಿ ಸಲ್ಲಿಸಿರುತ್ತೇನೆ ಅಂತಾ ಉತ್ತರಿಸುತ್ತಾರೆ. ಸದ್ರಿ ಅರ್ಜಿಯನ್ನು ನೀವು ಖುದ್ದಾಗಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಪ್ರತಿವಾದಿಗಳು ಹೇಳಿದ್ದಕ್ಕೆ ಸಾಕ್ಷಿ ನಾನು ಖುದ್ದಾಗಿ ಅರ್ಜಿ ಸಲ್ಲಿಸಿದ್ದೇನೆ ಅಂತಾ ಉತ್ತರಿಸುತ್ತಾರೆ. ಭೂಪರಿವರ್ತನೆಗೆ ಸಂಬಂಧಿಸಿದಂತೆ ಸಹಿ ವಗೈರೆಯನ್ನು ಯಾರು ಮಾಡಿಕೊಟ್ಟರು ಎಂದರೆ ಸಾಕ್ಷಿ ಪ್ರತಿವಾದಿಗಳೇ ಮಾಡಿಕೊಟ್ಟರು ಅಂತಾ ಉತ್ತರಿಸುತ್ತಾರೆ. ಆ ರೀತಿ ಪ್ರತಿವಾದಿಗಳು ಸಹಿ ಮಾಡಿಕೊಟ್ಟ ಪತ್ರಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ ಅಂತಾ ಉತ್ತರಿಸುತ್ತಾರೆ. ಅಂತಹ ಸಹಿ ಮಾಡಿರುವ ಕಾಗದ ಪತ್ರಗಳನ್ನು ಈ ದಾವೆಯಲ್ಲಿ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಯಾವ ಸರ್ವೆ ನಂಬರ್ ಗಳ ಬಾಬ್ತು ಭೂಪರಿವರ್ತನೆ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ 1 ಗುಂಟೆ ಹಾಗೂ 4 ಗಂಟೆ 6 ಆಣೆ ಜಾಗಕ್ಕೆ ಸಂಬಂಧಪಟ್ಟಂತೆ ಭೂಪರಿವರ್ತನೆ ಮಾಡಿಸಿಕೊಂಡಿದ್ದೇನೆ ಅಂತಾ ಉತ್ತರಿಸುತ್ತಾರೆ. ಸದ್ರಿ ಭೂಪರಿವರ್ತನೆಯನ್ನು ಯಾವ ಇಸವಿಯಲ್ಲಿ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ 2024 ರಲ್ಲಿ ಮಾಡಿಕೊಂಡಿದ್ದೇನೆ ಅಂತಾ ಉತ್ತರಿಸುತ್ತಾರೆ. ನಾನು ಸದ್ರಿ ಜಮೀನುಗಳಿಗೆ ಸಂಬಂಧಿಸಿದಂತೆ ಲೇಔಟ್ ಪ್ಲಾನ್‌ಗಳನ್ನು ಮಾಡಿಕೊಂಡಿಲ್ಲ. ಯಾಕೆಂದರೆ ಭೂಪರಿವರ್ತನೆ ಮಾಡಿಸಿಕೊಳ್ಳುವಾಗಲೇ ನ್ಯಾಯಾಲಯದಿಂದ ತಡೆಯಾಜ್ಞೆ ಆದೇಶ ಸಿಕ್ಕಿರುವುದರಿಂದ ಮಾಡಿಸಿಕೊಂಡಿಲ್ಲ ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ತಡೆಯಾಜ್ಞೆ ಇರುವ ವಿಷಯ ಪ್ರತಿವಾದಿಗಳು ನನಗೆ ಹೇಳಿರಲಿಲ್ಲ ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಒಂದು ಬೋಜಾ ಇರುವ ಬಗ್ಗೆ ಸಹಾ ಅವರು ನನಗೆ ಹೇಳಿರಲಿಲ್ಲ ಅಂತಾ ಉತ್ತರಿಸುತ್ತಾರೆ. ತಡೆಯಾಜ್ಞೆ ಹಾಗೂ ಬೋಜಾ ಇರುವ ವಿಷಯ ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ಭೂಪರಿವರ್ತನೆ ಮಾಡಿಸಿಕೊಳ್ಳುವಾಗ ಒಂದೊಂದೇ ವಿಷಯ ಗೊತ್ತಾಯಿತು ಅಂತಾ ಉತ್ತರಿಸುತ್ತಾರೆ. ಯಾವ ನ್ಯಾಯಾಲಯದಿಂದ ತಡೆಯಾಜ್ಞೆ ಇರುವುದು ನಿಮಗೆ ಗೊತ್ತಾಯಿತು ಎಂದರೆ ಸಾಕ್ಷಿ ಯಾವ ನ್ಯಾಯಾಲಯದಿಂದ

ಎಂಬುದು ನನಗೆ ಗೊತ್ತಿಲ್ಲ ಅಂತಾ ಉತ್ತರಿಸುತ್ತಾರೆ. ಯಾವ ಸರ್ವೆ ನಂಬರ್ ಬಗ್ಗೆ ನ್ಯಾಯಾಲಯದಿಂದ ತಡೆಯಾಜ್ಞೆ ಇತ್ತು ಎಂದರೆ ಸಾಕ್ಷಿ ಜಂಟಿ ಇರುವ ಆಸ್ತಿಗೆ ತಡೆಯಾಜ್ಞೆ ಇತ್ತು ಅಂತಾ ಉತ್ತರಿಸುತ್ತಾರೆ.

12. ದಾವಾ ಪತ್ರದ ಶೆಡ್ಯೂಲಿನಲ್ಲಿ ಕಾಣಿಸಿರುವ ಆಸ್ತಿಗಳ ಬಗ್ಗೆ ತಡೆಯಾಜ್ಞೆ ಇತ್ತಾ ಎಂದರೆ ಸಾಕ್ಷಿ ಆ ಪೈಕಿ ಒಂದು ಪಹಣಿಪತ್ರಿಕೆಯಲ್ಲಿ ತಡೆಯಾಜ್ಞೆ ಇತ್ತು ಅಂತಾ ಉತ್ತರಿಸುತ್ತಾರೆ. ನಿಪಿ. 4 ರಲ್ಲಿ ಕಾಣಿಸಿರುವ ಆಸ್ತಿಗಳಿಗೆ ತಡೆಯಾಜ್ಞೆ ಇತ್ತಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಯಾವ ಸರ್ವೆ ನಂಬರಿಗೆ ತಡೆಯಾಜ್ಞೆ ಇತ್ತು ಎಂದರೆ ಸಾಕ್ಷಿ ನಂಬರ್ ನೆನಪಿಗೆ ಬರುತ್ತಿಲ್ಲ ಅಂತಾ ಉತ್ತರಿಸುತ್ತಾರೆ. ನ್ಯಾಯಾಲಯದ ತಡೆಯಾಜ್ಞೆ ಹಾಗೂ ಬೋಜಾ ಇದ್ದ ಬಗ್ಗೆ ನಿಪಿ. 4 ರಲ್ಲಿ ಉಲ್ಲೇಖ ಮಾಡಲಾಗಿದೆಯೇ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಎಗ್ರಿಮೆಂಟನ್ನು ಮೊದಲೇ ಮಾಡಿಕೊಂಡಿದ್ದು ತಡೆಯಾಜ್ಞೆ ಹಾಗೂ ಬೋಜಾ ಇರುವ ವಿಚಾರ ನನಗೆ ನಂತರ ಗೊತ್ತಾಯಿತು ಅಂತಾ ಉತ್ತರಿಸುತ್ತಾರೆ.

13. ಯಾವದೇ ಆಸ್ತಿಯನ್ನು ಖರೀದಿಸುವ ಮೊದಲು ನ್ಯಾಯಾಲಯದಿಂದ ತಡೆಯಾಜ್ಞೆ ಇದೆಯೇ, ಬೋಜಾ ಇದೆಯೇ ಎಂಬುದನ್ನು ವಿಚಾರಿಸಿಕೊಂಡೇ ಖರೀದಿಗೆ ಮುಂದಾಗುತ್ತಾರೆ ಎಂದರೆ ಹೌದು ಆದರೆ ಪ್ರತಿವಾದಿಗಳು ಎಲ್ಲಾ ಸರಿಯಾಗಿದೇ ಇದೆ ಅಂತಾ ಹೇಳಿಯೇ ಎಗ್ರಿಮೆಂಟ್ ಮಾಡಿಕೊಟ್ಟಿರುವುದು ಅಂತಾ ಉತ್ತರಿಸುತ್ತಾರೆ.

14. ನಿಪಿ 4 ರ ಪ್ರಕಾರ ಒಟ್ಟೂ 11 ಗುಂಟೆ 12 ಆಣೆ ಖರೀದಿ ಮಾಡುವ ಬಗ್ಗೆ ಉಲ್ಲೇಖ ಇದೆ ಎಂದರೆ ಸಾಕ್ಷಿ ಖರೀದಿ ಮಾಡುವ ಬಗ್ಗೆ ಅಲ್ಲ, ಡೆವೆಲಪಮೆಂಟ್ ಮಾಡುವ ಬಗ್ಗೆ ಉಲ್ಲೇಖ ಇದೆ ಅಂತಾ ಉತ್ತರಿಸುತ್ತಾರೆ.

15. ನಾನು ಹೇಳುವ ಡೆವೆಲಪಮೆಂಟ್ ಬಗ್ಗೆ ಮಾಡಿಕೊಂಡಿರುವ ಎಗ್ರಿಮೆಂಟು ನಿಪಿ 4 ಇರುವುದಿಲ್ಲ ಎಂದರೆ ಸಾಕ್ಷಿ ಡೆವೆಲಪಮೆಂಟ್ ಬಗ್ಗೆ ಮಾಡಿಕೊಂಡಿರುವ ಎಗ್ರಿಮೆಂಟ್ ಅದೇ ಆಗಿರುತ್ತದೆ ಅಂತಾ ಉತ್ತರಿಸುತ್ತಾರೆ. ಶೇಕಡಾ 35 ರ ಡೆವೆಲಪ್ಡ ಏರಿಯಾ ಅಂದರೆ ನಿಮ್ಮ ಪ್ರಕಾರ ಏನು ಎಂದರೆ ಸಾಕ್ಷಿ ನಾವು ಕಟ್ಟುವ ವಾಣಿಜ್ಯೇತರ ಕಟ್ಟಡದಲ್ಲಿ ಶೇ.35 ಭಾಗ ಪ್ರತಿವಾದಿಯರಿಗೆ ಕೊಡುವುದು ಅಂತಾ ಉತ್ತರಿಸುತ್ತಾರೆ. ಶೇ.35 ರ ಅನುಪಾತ ವಾಣಿಜ್ಯೇತರ ಕಟ್ಟಡಕ್ಕೆ ಎಂಬ ಬಗ್ಗೆ ನಿಪಿ. 4 ರಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ಸರಿ.

16. ದಿಃ 03.05.2024 ರಂದು ಪ್ರತಿವಾದಿಗಳಿಂದ ನನಗೆ ವಕೀಲರ ನೋಟಿಸು ಬಂದಿತ್ತು ಎಂದರೆ ಸರಿ. ಪ್ರತಿವಾದಿಯರು ನನ್ನಿಂದ ಪಡೆದ ರೂ. 2 ಲಕ್ಷ ಹಣವನ್ನು ನನಗೆ ವಾಪಾಸು ಕೊಟ್ಟಿದ್ದರು ಎಂದರೆ ಸುಳ್ಳು. ಭೂಪರಿವರ್ತನೆ ಹಾಗೂ ಬೋಜಾ ತೆಗೆಯಿಸಲು ಬೇಕಾಗಿ ಪ್ರತಿವಾದಿಯರು ನನಗೆ ರೂ. 1,30,000/- ಸಂದಾಯ ಮಾಡಿರುತ್ತಾರೆ ಎಂದರೆ ಸುಳ್ಳು. ದಿಃ 28.05.2024 ರಂದು ಆರ್ ಟಿ ಜಿ ಎಸ್ ಮುಖಾಂತರ ರೂ. 2 ಲಕ್ಷ ಹಾಗೂ ರೂ. 1,30,000/- ಹಣ ನನ್ನ ಎಸ್ ಬಿ ಐ ಬ್ಯಾಂಕ್ ಖಾತೆಯಾದ 10638131559 ಕ್ಕೆ ಪ್ರತಿವಾದಿಯರು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಬ್ಯಾಂಕ್ ಖಾತೆಯನ್ನು ಪರಿಶೀಲಿಸಿ ಹೇಳಬೇಕಾಗುತ್ತದೆ ಅಂತಾ ಉತ್ತರಿಸುತ್ತಾರೆ. ಮೇಲೆ ಹೇಳಿದ ಅಕೌಂಟ್ ನಂಬರು ನನ್ನದೇ ಆಗಿರುತ್ತದೆ ಎಂದರೆ ಸರಿ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಕಾರವಾರ.